†ಶ್ರೀ ಬಿ. ರಾಚಯ್ಯ.—ಈ ವಿಚಾರವನ್ನು ನಾನು ಒಪ್ಪುವುದಿಲ್ಲ. ಹಾಸನ ಜಿಲ್ಲೆಯಲ್ಲ ಕಳ್ಳತನ ತಪ್ಪಿಸುವುದಕ್ಕೆ 6 ಕಡೆಗಳಲ್ಲಿ ತನಿಖಾ ಠಾಣೆಗಳನ್ನು ಹಾಕಿದ್ದೇವೆ. ಅಲ್ಲದೆ ಶಿರಹಟ್ಟಿಯ ಹತ್ತಿರ ಒಂದನ್ನು ಹಾಕುವುದಕ್ಕೆ ಪ್ರಪೋಸಲ್ ಕೇಳಿದ್ದೇವೆ.

ಶ್ರೀ ಚೆನ್ನಬೈರೇಗೌಡ.—120 ಪ್ರಕರಣಗಳನ್ನು ಬಿಟ್ಟುಬಿಟ್ಟಿದ್ದೀರಿ. ಅವುಗಳ ಬಗ್ಗೆ ಏಕೆ ಪ್ರಾಸಿಕ್ಯೂಷನ್ ನಡೆಸಿಲ್ಲ ?

ಶ್ರೀ ಬಿ. ರಾಚಯ್ಯ.—ಸಾಬೆ, ಟಿಂಬರ್ ಮುಂತಾದ ಸಣ್ಣಪುಟ್ಟ ಪ್ರಕರಣಗಳನ್ನು ಬಿಟ್ಟು ದೊಡ್ಡದೊಡ್ಡ ಪ್ರಕರಣಗಳ ಬಗ್ಗೆ ಪ್ರಾಸಿಕ್ಯೂಟ್ ಮಾಡಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕೆಲವರು ಚೌಬೀನೆ, ಗಂಧದಮರ, ಮತ್ತು ಬೆಲೆ ಬಾಳುವ ಮರಗಳನ್ನು ಲಾರಿಗಳಲ್ಲಿ ಕಳ್ಳತನದಲ್ಲಿ ಸಾಗಿಸಿ, ಒಂದೊಂದು ಲಾರಿಗೆ 50 ಸಾವಿರ ರೂಪಾಯಿಗಳವರೆಗೆ ಮಾರಿ ಲಕ್ಷಗಟ್ಟಲೆ ಸಂಪಾದನೆಮಾಡಿರುವುದು ನಿಜವೇ, ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಕಳ್ಳತನದ ಪ್ರಸಂಗಗಳ ಮೇಲೆ ಕ್ರಮಗಳನ್ನು ಸಾಕಷ್ಟು ತೆಗೆದು ಕೊಂಡಿದ್ದೇವೆ. ಅಲ್ಲದೆ ಕಳ್ಳತನದ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಾಗಲೆಲ್ಲಾ ಸೂಕ್ತ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳುತ್ತಿದ್ದೇವೆ. ಎಲ್ಲಿಯವರೆಗೆ ಕಳ್ಳರು ಇರುತ್ತಾರೋ ಅಲ್ಲಿಯ ವರೆಗೆ ಇಂಥ ಪ್ರಸಂಗಗಳು ನಡೆಯುವುದು ಸ್ವಾಬಾವಿಕ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1962-63ನೇ ಸಾಲಿನಲ್ಲಿ ಚೌಬೀನೆ ಕಳ್ಳಸಾಗಾಣಿಕೆ ಪ್ರಕರಣದಲ್ಲಿ 6,525-96 ರೂಪಾಯಿಗಳು ವಸೂಲಾಗಿದೆಯೆಂದು ಹೇಳಿದೆ. ಇದಕ್ಕೆ ತಾವು ಏನಾದರೂ ಪರವಾನೆ ಕೊಟ್ಟಿದ್ದೀರ ?

ಶ್ರೀ ಬಿ. ರಾಚಯ್ಯ.—ಸಾಬೆ ಮತ್ತು ಇತರೇ ಮರಗಳನ್ನು ತರುವುದಕ್ಕೆ ಪರವಾನೆ ಕೊಟ್ಟಿತ್ತು, ಚೌಬೀನೆ ಮತ್ತು ಗಂಧದಮರಗಳಂಥ ಬೆಲೆಬಾಳುವ ಮರಗಳನ್ನು ತರಲು ಪರವಾನೆ ಕೊಟ್ಟಿರಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ರೂಪಾಯಿಗಳ ಮರಗಳು ಕಳ್ಳಸಾಗಾಣಿಕೆಯಾಗಿದೆ ?

ಶ್ರೀ ಬಿ. ರಾಚಯ್ಯ.—ಕೆಲವು ಸಂದರ್ಭಗಳಲ್ಲಿ ಸಾವಿರಾರು ರೂಪಾಯಿಗಳ ಮರಗಳು ಕಳ್ಳ ಸಾಗಾಣಿಕೆಯಾಗಿದೆ.

Mr. SPEAKER.—I put Question No. 217.

---

## Societies registered for the Construction of Houses for Harijans.

*೪.—217. Smt. B. L. SUBBAMMA (Chickmagalur).—

Will the Government be pleased to state :—

(*a*) the number of societies registered for the construction of houses to Harijans and Girijans in Chickmagalur District ;

(*b*) the amount provided to the said societies during the last 3 years.

(*c*) whether they are aware that the construction of houses to Harijans and Girijans in this District has not been taken up so far ;

(*d*) whether they would take action to get this work executed early ?

*A.*—Sri K. PUTTASWAMY (Minister for Co-operation and Housing).—

(*a*) Six.
(*b*) Nil.
(*c*) Yes.
(*d*) Yes.

ಶ್ರೀಮತಿ ರತ್ನಮ್ಮ ಮಾಧವರಾವ್.—ಮೂರು ವರ್ಷದಿಂದ ಸಹಕಾರ ಸಂಘಕ್ಕೆ ಏನೂ ಹಣ ಒದಗಿಸಿಲ್ಲದೇ ಇರುವುದಕ್ಕೆ ಕಾರಣ ಏನು ?

ಶ್ರೀ ಕೆ. ಪುಟ್ಟಸ್ವಾಮಿ.—ಲೋನ್ ಅಪ್ಲಿಕೇಷನ್ ಬಿಲ್ಡ್ ಅಪ್ ಮಾಡಿ ಕಳುಹಿಸಿರಲಿಲ್ಲ.

ಶ್ರೀ ಬಿ. ಚನ್ನಬೈರೇಗೌಡ.—ಲೋನ್ ಅಪ್ಲಿಕೇಷನ್ ಬಿಲ್ಡ್ ಅಪ್‌ಮಾಡಿ ಕಳುಹಿಸಿ ಶೇರ್ ಅಮೌಂಟು ಎಷ್ಟು ಎಂದು ಗೊತ್ತುಮಾಡಿ ಸೊಸೈಟಿ ರಿಜಿಸ್ಟರ್ ಆಗಿದ್ದರೂ ಹರಿಜನ ಮತ್ತು ಗಿರಿಜನ ರಿಗೆ ಏತಕ್ಕೆ ಲೋನ್‌ಕೊಟ್ಟಿಲ್ಲ ?

ಶ್ರೀ ಕೆ. ಪುಟ್ಟಸ್ವಾಮಿ.—ಲೋನ್ ಅಪ್ಲಿಕೇಷನ್ ಬಿಲ್ಡ್‌ಅಪ್ ಮಾಡಿ ಕಳಿಸಿಲ್ಲ. ಅದಕ್ಕಾಗಿ ಕೊಟ್ಟಿಲ್ಲ.

ಶ್ರೀ ಜಿ. ಸಿ. ಭಾಗೀರಥಮ್ಮ.—ಲೋನ್ ಅಪ್ಲಿಕೇಷನ್ ಬಿಲ್ಡ್‌ಅಪ್ ಮಾಡಿ ಕಳುಹಿಸಿರುವ ಸಂಘದವರಿಗೆ ಲೋನ್ ಕೊಟ್ಟಿದ್ದಾರೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಲೋನ್ ಅಪ್ಲಿಕೇಷನ್ ಬಿಲ್ಡ್‌ಅಪ್‌ಮಾಡಿ ಕೊಟ್ಟಿಲ್ಲ. ಆದುದರಿಂದ ಅವರಿಗೆ ಲೋನ್ ಕೊಡುವುದಕ್ಕೆ ಆಗಲಿಲ್ಲ. ಇನ್ನು ಕೆಲವುಕಡೆ ಲೋನ್‌ರಿಕಾರ್ಡ್ಸ್ ಬಿಲ್ಡ್‌ಅಪ್‌ಮಾಡಿ ಕೊಟ್ಟಿದ್ದಾರೆ. ಅಲ್ಲಿ ಬಜೆಟ್ ಹಣ ನೋಡಿಕೊಂಡು ಕೊಟ್ಟಿದ್ದೇವೆ.

Sri C. J. MUCKANNAPPA.—I want to know the money provided for these societies.

Mr. SPEAKER.—How can it be given in regard to a particular society? They generally provide under the head 'Loan assistance to Harijan Co-operatives'.

Sri C. J. MUCKANNAPPA.—The Societies are registered for the construction of houses for Harijans and they are six in number. But none of them is provided with money. I want to know the agency that distribute this money if at all the Government is going to provide money ?

Sri K. PUTTASWAMY.—The amount will be made available to the Co-operation Department and the Co-operation Department will make available to primary co-operative societies. I may say for the information of this House that the Government is going to draw about Rs. 3½ crores before the end of March for the purpose of financing these primary societies of Harijans and Girijans.

ಶ್ರೀ ಎಸ್. ನುಬ್ಬಯ್ಯನಾಯಕ್.—ಹರಿಜನ ಮತ್ತು ಗಿರಿಜನ ಸಹಕಾರ ಸಂಘಗಳು ಕ್ರಮ ನಿಬಂಧನೆಗಳಿಗನುಸಾರವಾಗಿ ಅದಕ್ಕೆ ಹಣ ಕೊಡುವುದಕ್ಕೆ ಸರ್ಕಾರದ ಹತ್ತಿರ ಇದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಈ ವರ್ಷ ಇದ್ದಂಥ ಹಣ ಕೆಲವು ಸೊಸೈಟಿಗಳಿಗೆ ಕೊಟ್ಟಿದ್ದೇವೆ. ಇನ್ನು ಲೈಫ್ ಇನ್‌ಷ್ಯೂರೆನ್ಸ್ ಕಾರ್ಪೋರೇಷನ್ನಿನಿಂದ ಮೂರುವರೆಕೋಟಿ ರೂಪಾಯಿ ಪಡೆಯಲು ಅವಕಾಶವಿದೆ. ಅದನ್ನು ಮಾರ್ಚಿ ತಿಂಗಳೊಳಗೆ ಪಡೆಯಲು ಅವಕಾಶವಿದೆ. ಆಮೇಲೆ ಎಲ್ಲಾ ಸೊಸೈಟಿಗಳಿಗೂ ಹಣ ಕೊಡಲು ಅವಕಾಶವಾಗುತ್ತದೆ.

ಶ್ರೀ ಎಸ್. ಗೋಪಾಲಗೌಡ.—ಪ್ರಾರಂಭದಲ್ಲಿ ಹರಿಜನರಿಗೆ ಮತ್ತು ಗಿರಿಜನರಿಗೆ ಯೋಜನೆ ಪ್ರಕಾರ ಸರ್ಕಾರ ನೇರವಾಗಿ ಮನೆಗಳನ್ನು ಕಟ್ಟಿಸಿಕೊಟ್ಟಿತ್ತು. ಅದರ ಬದಲು ಈಗ ಕೋ ಆಪರೇಟಿವ್ ಸೊಸೈಟಿಗಳನ್ನು ಮಾಡಿಕೊಳ್ಳಿ ತನ್ಮೂಲಕ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಸರ್ಕಾರ ದವರು ಹಣ ಸಹಾಯ ಮಾಡುತ್ತೇವೆ ಎಂದು ಹೇಳಿದರು. ಮೂರು ವರ್ಷಗಳಿಂದ ಬಡಜನರಿಂದ ಸೊಸೈಟಿಗೋಸ್ಕರ ಷೇರು ಹಣವನ್ನು ತೆಗೆದುಕೊಂಡು ಎನ್. ಇ.ಎಸ್. ಬ್ಲಾಕ್‌ನವರು ಮನೆಗಳನ್ನು ಕಟ್ಟುವುದಕ್ಕೆ ರಿಕಾರ್ಡು ಮಾಡದೆ ಸಾಲಕ್ಕೆ ಬೇಡಿಕೆಗಳನ್ನು ಕಳುಹಿಸಿಕೊಡದೆ ಹರಿಜನ ಮತ್ತು ಗಿರಿಜನರಿಗೆ ರಾಜ್ಯದಲ್ಲಿ ಎಲ್ಲೂ ಮನೆಗಳು ಆಗದಂತೆ ಈ ಯೋಜನೆಯನ್ನು ವಿಫಲಗೊಳಿಸುತ್ತಾ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಶ್ರೀ ಕೆ. ಪುಟ್ಟಸ್ವಾಮಿ.—ರಾಜ್ಯದಲ್ಲಿ ಎಲ್ಲೂ ಮನೆಗಳು ಆಗಿಲ್ಲ ಎಂದು ಹೇಳುವುದು ಸರಿಯಲ್ಲ. ಸರ್ಕಾರ ಮೂರು ವರ್ಷಗಳಿಂದಲೂ ಸೊಸೈಟಿಗಳಿಗೆ ಹಣವನ್ನು ಕೊಟ್ಟಿದೆ. ಮತ್ತು ಮನೆಗಳು ಬಂದಿವೆ. ಈ ಆರು ಸೊಸೈಟಿಗಳಿಗೆ ಹಣ ಕೊಡುವುದಕ್ಕೆ ಆಗಲಿಲ್ಲ, ಸರ್ಕಾರದ ಬಡ್ಜೆಟ್ಟಿನಲ್ಲಿ ಎಸ್ಟಿಮೇಟಿಗಾಗಿದಷ್ಟಕ್ಕಂಥ ಹಣ ಕಡಿಮೆಯಾಗಿರುವುದರಿಂದ, ಎಲ್ಲಾ

ಸೊಸೈಟಿಗಳಿಗೂ ಕೂಡ ಸಾಕಷ್ಟುಮಟ್ಟಿಗೆ ಹಣ ಸಹಾಯ ಮಾಡಬೇಕೆಂಬ ದೃಷ್ಟಿಯಿಂದ ಸರ್ಕಾರ ಇದಕ್ಕಾಗಿ 3 ಕೋಟಿ ರೂಪಾಯಿ ಸಾಲ ಪಡೆಯುತ್ತದೆ. ಮಾರ್ಚ್ ತಿಂಗಳನೊಳಗೆ ಆ ಹಣ ಪಡೆಯಲಿಕ್ಕೆ ಆಗುತ್ತದೆ. ಆ ಮೇಲೆ ಎಲ್ಲಾ ಸೊಸೈಟಿಗಳಿಗೂ ಹಣ ಕೊಡಲಾಗುತ್ತದೆ.

ಶ್ರೀ ಪಿ. ವೆಂಕಟಗಿರಿಯಪ್ಪ.—ಕಳೆದ ಮೂರು ವರ್ಷಗಳಿಂದ ಹರಿಜನ ಮತ್ತು ಗಿರಿಜನರಿಗೆ ಮನೆಗಳನ್ನು ಕಟ್ಟಲು ಹಣ ಒದಗಿಸಿದ್ದು ಎಷ್ಟು ಮತ್ತು ಖರ್ಚು ಮಾಡಿದ್ದು ಎಷ್ಟು ?

ಶ್ರೀ ಕೆ. ಪುಟ್ಟಸ್ವಾಮಿ.—ನೋಟೀಸ್ ಬೇಕು.

ಶ್ರೀಮತಿ ನುಶೀಲಾಬಾಯಿ ಹೀರಾಚಂದ್ ಪಾ.—ಮೂರುವರೆ ಕೋಟಿ ಬಂದ ಮೇಲೆ ಹರಿಜನ ಮತ್ತು ಗಿರಿಜನರಿಗೆ ರೊಕ್ಕ ಕೊಟ್ಟು ಮನೆ ಕಟ್ಟಲಿಕ್ಕೆ ಸಾಲ ಕೊಡುತ್ತೇವೆ ಎಂದು ಹೇಳಿದಿರಿ. ಕೆಲವು ಹೊಸ ಸೊಸೈಟಿಗಳನ್ನು ಮಾಡಿದರೆ ಅವುಗಳಿಗೂ ಕೊಡುವುದಕ್ಕೆ ಶಕ್ಯ ಇದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಹಣ ಬಂದ ಮೇಲೆ ಪ್ರೈಮರಿ ಸೊಸೈಟಿಗಳಿಂದ ಎಷ್ಟು ಆರ್ಜಿ ಬಂದಿವೆ ಎಂದು ನೋಡಿ ಅವುಗಳಿಗೆಲ್ಲಾ ಹಣ ಕೊಡುವುದಕ್ಕೆ ಆಗುತ್ತದೆ.

Mr. SPEAKER.—I put Question No. 104.

---

## Public Debt position of the State.

*Q.—104. Sri A. KRISHNA SHETTY (Mangalore-II).—

Will the Government be pleased to state :—

(*a*) the Public Debt position of the newly formed Mysore State as on 1st November 1956 and on 31st March 1965 ;

(*b*) the total value of guarantees given by the Government in respect of loans, etc., raised by statutory corporations, local bodies and other institutions ;

(*c*) the assets of the State based on actuals as on 31st March 1965 ;

*A.*—Sri RAMAKRISHNA HEGDE (Minister for Finance).—

| | | *As on 1st November 1956.* | *As on 31st March 1965* |
|---|---|---|---|
| | | (*Rs. in lakhs*) | |
| (*a*) Public debt | ... | 2511.08 | 4780.59 |
| Floating Debt— | | | |
| Ways and Means Advance | ... | — | 2796.58 |
| Loans from— | | | |
| Central Govt. | ... | 4456.58 | 17583.24 |
| Other Loans | ... | — | 1356.35 |
| Total | ... | 6967.66 | 26516.76 |

(*b*) The total value of guarantees as on 31st March 1965 stood at Rs. 8832.87 lakhs against which a sum of Rs. 4203.78 lakhs was outstanding apart from interest amounting to Rs. 10.60 lakhs which was also guaranteed. The details are as in the statement 'A' placed on the Table of the House.